ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01**

ಸಂಖ್ಯೆ: ಅ1/ಪ್ರಾ ಶಿ ವರ್ಗ 01/2019–20 ದಿನಾಂಕ: 27.09.2019

ಜ್ಞಾಪನ

ವಿಷಯ 2018–19ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಅಂತರ ಘಟಕ (ವಿಭಾಗದ ಒಳಗೆ ಮತ್ತು ವಿಭಾಗದ ಹೊರಗಿನ ಸಮಗ್ರ ಪಟ್ಟಿಯಂತೆ) ವರ್ಗಾವಣಾ ಕೌನ್ಸಿಲಿಂಗ್‌ಗೆ ಕ್ರಮ ಸಂಖ್ಯೆವಾರು ಪರಿಷ್ಕೃತ ವೇಳಾಪಟ್ಟಿ ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ :1. ಈ ಕಛೇರಿ ಜ್ಞಾಪನ ಸಮ ಸಂಖ್ಯೆ, ವಿವಿಧ ದಿನಾಂಕಗಳು ಮತ್ತು ದಿನಾಂಕ:21.09.2019

2. ಈ ಕಛೇರಿ ಜ್ಞಾಪನ ಸಂಖ್ಯೆ ಸಿ3(7) ಪ್ರಾ ಶಾ ಶಿ ವರ್ಗ–08/2018–19 ದಿ:22.09.2019

***

ವಿಷಯದನ್ವಯ ಉಲ್ಲೇಖಿತ (1)ರ ವೇಳಾಪಟ್ಟಿಗನುಸಾರ ನಡೆಯುತ್ತಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಘಟಕದ ಹೊರಗಿನ ವರ್ಗಾವಣೆಗಳನ್ನು ದಿನಾಂಕ: 22.09.2019 ರಿಂದ ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಇದೀಗ ಚುನಾವಣೆಗಳು ಮುಂದೂಡಲ್ಪಟ್ಟಿರುವ ಪ್ರಯುಕ್ತ ನೀತಿ ಸಂಹಿತೆ ಕ್ರಮಗಳು ಸಹ ಅನ್ವಯವಾಗುವುದಿಲ್ಲ. ಪ್ರಯುಕ್ತ, ಮೇಲಿನಂತೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕೆಳಗಿನ ಕ್ರಮಸಂಖ್ಯೆವಾರಿನಂತೆ ವೇಳಾಪಟ್ಟಿಯನ್ನು ಹಮ್ಮಿಕೊಂಡು ಮುಂದುವರೆಸಲಾಗಿದೆ. ಈ ಬಗ್ಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು.

ಹಾಗೆಯೇ, ವರ್ಗಾವಣಾ ಪ್ರಾಧಿಕಾರಿಯವರು ದಿನದ ಅಂತ್ಯದಲ್ಲಿ ಮುಂದಿನ ದಿನದ ಕೌನ್ಸಿಲಿಂಗ್‌ಗಾಗಿ ಲಭ್ಯವಿರುವ ಖಾಲಿ ಹುದ್ದೆಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಕ್ರಮಕೈಗೊಳ್ಳತಕ್ಕದ್ದು.

| ಕ್ರಮ ಸಂಖ್ಯೆ | ದಿನಾಂಕ | ಸಮಯ | ಅಂತಿಮ ಆಧ್ಯತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಗಳಂತೆ |
|---|---|---|---|
| ಸಹ ಶಿಕ್ಷಕರು | | | |
| 1 | 30.09.2019 | ಬೆಳಿಗ್ಗೆ 9 ರಿಂದ | 1401 ರಿಂದ 1700ರ ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| 2 | 01.10.2019 | ಬೆಳಿಗ್ಗೆ 9 ರಿಂದ | 1701 ರಿಂದ 2000ರ ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| 3 | 03.10.2019 | ಬೆಳಿಗ್ಗೆ 9 ರಿಂದ | 2001 ರಿಂದ 2300ರ ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| 4 | 04.10.2019 | ಬೆಳಿಗ್ಗೆ 9 ರಿಂದ | 2301 ರಿಂದ 2600ರ ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| 5 | 05.10.2019 | ಬೆಳಿಗ್ಗೆ 9 ರಿಂದ | 2601 ರಿಂದ 2900ರ ವರೆಗಿನ ಪ್ರಾಥಮಿಕ ಶಾಲಾ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |

ಮುಂದಿನ ಕ್ರಮಸಂಖ್ಯೆಗಳ ಮತ್ತು ಅಂತರ್–ಘಟಕ ಪರಸ್ಪರ ವರ್ಗಾವಣಾ ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ನಂತರದಲ್ಲಿ ಪ್ರಕಟಿಸಲಾಗುವುದು.

ಅನಿವಾರ್ಯ ಕಾರಣಗಳಿಂದ ಕ್ರಮಸಂಖ್ಯೆವಾರು ಕೌನ್ಸಿಲಿಂಗ್ ಪ್ರಕ್ರಿಯೆ ಆಯಾ ದಿನಾಂಕಗಳಂದು ಪೂರ್ಣಗೊಳ್ಳದಿದ್ದಲ್ಲಿ, ಬದಲಾದ ದಿನಾಂಕಗಳನ್ನು ತಕ್ಷಣ ಪ್ರಕಟಿಸಲಾಗುವುದು.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು.

ಪ್ರತಿ

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಇಲಾಖಾ ವೆಬ್–ಸೈಟ್‌ನಲ್ಲಿ ಪ್ರಕಟಿಸಲು